## ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಜನೂರು ಅಗ್ರಹಾರ. ಶಿವಮೊಗ್ಗ:ತಾ

ತರಗತಿ:3 ವಿಷಯ:ಕನ್ನಡ ಮಾರ್ಗದರ್ಶಕರು:ಶ್ರೀ ಸೋಮಲಿಂಗಪ್ಪ ಜೆ.

### ಬಾವಿಯಲ್ಲಿ ಚಂದ್ರ

ಈ ಪದ್ಯವನ್ನು
ಹಾಡಿದವರು:ಕು:ಲಕ್ಷಯಾ,ಕೋಮಲ,ಧನುಷ್
,ಅನನ್ಯಮತ್ತು ಶಿವಕುಮಾರ್



ಕೇಳಲು ಇಲ್ಲಿ ಕ್ಲಿಕ್ಕಿಸಿರಿ ಹಾಡನ್ನು

1 | **1. ಬಾವಿಯಲ್ಲಿ ಚಂದ್ರ** | 6



ತಿಂಗಳ ಬೆಳಕಿನ ಇರುಳಿನಲಂದು
ಅಮ್ಮನು ಕೆಲಸದೊಳಿರುತಿರೆ ಕಂಡು
ಗೋಪಿಯು ಪುಟ್ಟುವು ಹೊರಗಡೆ ಬಂದು
ಬಾವಿಗೆ ಇಣುಕಿದರು ।

ಬಾವಿಲಿ ಚಂದ್ರನ ಬಿಂಬವ ಕಂಡು
ಚಂದ್ರನು ಬಾವಿಗೆ ಬಿದ್ದನು ಎಂದು
ಅಯ್ಯೋ! ಪಾಪವೇ ಎನ್ನುತಲೊಂದು
ಕೊಕ್ಕೆಯ ಹುಡುಕಿದರು ।

ಚಂದ್ರನ ಮೇಲಕೆ ಎತ್ತಲಿಕೆಂದು
ಬಾವಿಯ ಹಗ್ಗಕೆ ಕೊಕ್ಕೆಯ ಬಿಗಿದು
ದೂರದಿ ಗೋಪಿಯ ನಿಲ್ಲಿಸಿ ಪುಟ್ಟು
ಹಗ್ಗವನಿಳಿಸಿದನು ।

ಹಗ್ಗದ ಕೊಕ್ಕೆಯು ಕಲ್ಲಿಗೆ ಸಿಕ್ಕಿ
ಪುಟ್ಟುವು ಚಂದ್ರನು ಸಿಕ್ಕೇ ಸಿಕ್ಕಿ
ಎನ್ನುತ ತುಂಬಾ ಬಲದಿಂದೆಳೆಯೇ
ಹಗ್ಗವು ತುಂಡಾಯ್ತು ।

ಎಳೆತದ ರಭಸಕೆ ಪುಟ್ಟುವು ಬಿದ್ದ
ಮೆಲ್ಲನೆ ಮನೆ ಕಡೆ ನೋಡುತಲೆದ್ದ
ತಂಗಿಗೆ ಆಗಸ ತೋರುತಲೆಂದ
ಗೋಪಿ ನೋಡಲ್ಲಿ ।

ಚಂದ್ರನ ಮೇಲಕೆ ಏರಿಸಿ ಬಿಟ್ಟೆ
ನಮ್ಮಯ ದೇವರ ಬದುಕಿಸಿ ಕೊಟ್ಟೆ
ಅಮ್ಮಗೆ ಗೊತ್ತಾದರೆ ನಾ ಕೆಟ್ಟೆ
ಎಂದೋಡಿದ ಪುಟ್ಟು ।

**ಹೊಸ ಪದಗಳ ಅರ್ಥ :**

ತಿಂಗಳು – ಚಂದ್ರ, ಚಂದಿರ, ಚಂದ್ರಮ, ಶಶಿ
ಇರುಳು – ರಾತ್ರಿ
ಇಣುಕು – ಹಣಿಕಿ ನೋಡು, ಬಗ್ಗಿ ನೋಡು
ಬಿಂಬ – ಪ್ರತಿರೂಪ, ಪಡಿನೆರಳು
ತುಂಡಾಗು –ಕಿತ್ತು ಹೋಗು, ಹರಿ
ರಭಸ – ವೇಗ
ಆಗಸ – ಆಕಾಶ, ಮುಗಿಲು, ಬಾನು